ಜಿಟಿ ಜಿಟಿ ಮಳೆ ಆಗಷ್ಟೇ ಬಂದು ನಿಂತಿತ್ತು. ವಟರುಗಪ್ಪೆಗಳು ಗುಂಯ್ಕ್ ಗುಂಯ್ಕ್ ಕೂಗುತ್ತಲೇ ಇದ್ದವು. ಅರುಂಧತಿಗೆ ಶಬ್ದಗಳು ಜಾಸ್ತಿಯಾಗಿ ಆಚೆಯಿಂದೀಚೆಗೂ ಈಚೆಯಿಂದಾಚೆಗೂ ಕಾಲು ಹೊತ್ತು ಹಾಕುತ್ತ ನಿದ್ದೆ ಮಾಡುವ ಯತ್ನದಲ್ಲಿದ್ದಳು. ಅದೇ ಹೊತ್ತಿಗೆ ಬಾಗಿಲು ಸಣ್ಣ ತಟ್ಟಿದ ಅನುಭವ. ಆ ಹೊತ್ತಿನಲ್ಲಿ ಯಾರೂ ಕೂಡ ಮನೆಗೆ ಬರುವ ಅಭ್ಯಾಸ ಇರಲಿಲ್ಲವಾದ್ದರಿಂದ ಅರುಂಧತಿಗೆ ತಣ್ಣಗಿನ ಭಯವೂ ಕುತೂಹಲವೂ ಆಗಿ ಗಡಿಯಾರ ನೋಡಿದಳು. ರಾತ್ರಿ ಎರಡು ಗಂಟೆ ತೋರಿಸುತ್ತಿತ್ತು. ಸದ್ದು ಮತ್ತಷ್ಟು ಜೋರಾಯಿತು. ಹೆದರಿಕೆಯ ಸೆಲೆಯೊಂದು ಅದರಿಂದ ಹಾದು ಬರುತ್ತಿರುವಂತೆ ಅನ್ನಿಸತೊಡಗಿತು. ಆದರೂ ಬಾಗಿಲು ತೆರೆಯುವ ಧೈರ್ಯವಾಗಲಿಲ್ಲ.

ಮನುಷ್ಯರನ್ನು ಮನುಷ್ಯರು ನಂಬುವ ಕಾಲ ಅದೆಂದಿಗೋ ಮುಗಿದು ಸಂಶಯಗಳು ಅಂಗಳ ಸುತ್ತುವ ಕಾಲವಾದ್ದರಿಂದ ಆಕೆ ಸುಮ್ಮನೆ ಎದ್ದು ಕೂತಳು. ಆಗಷ್ಟೇ ನಿದ್ರೆಗೆ ಜಾರಿದ್ದ ಮಣಿವೇಲು ಅರ್ಥಾತ್ ಅರುಂಧತಿಯ ಗಂಡನಿಗೆ ಸದ್ದು ರಗಳೆಯದ್ದು ಅನ್ನಿಸಿರಬೇಕು; "ಯಾರು ನೋಡಬಾರದ" ಕೂಗಿಕೊಂಡ.

ಬಾಗಿಲು ತೆಗೆದಿದ್ದೇ ತಡ ಹೆಣ್ಣಿನ ಆಕೃತಿಯೊಂದು ದಢ್ ಎಂದು ಒಳಗೆ ನುಗ್ಗಿಯೇ ಬಿಟ್ಟಿತು. ಅರುಂಧತಿ ತಡಬಡಾಯಿಸಿದಳು. ಒಂದು ಕ್ಷಣ ಅರಿವಿನ ಎಚ್ಚರ ತಪ್ಪಿದವಳಂತೆ, "ಯಾರು ಯಾರು" ಜೋರು ಕೂಗಿದಳು. ಆ ಆಕೃತಿ ಆಕೆಯ ಬಾಯನ್ನು ಒತ್ತಿ ಹಿಡಿಯಿತು. "ಅಕ್ಕಾ ಹೆದರಬೇಡಿ" ಎನ್ನುತ್ತ ದಬ್ಬಿಕೊಂಡೇ ಬಂದು ಜೋರಾಗಿ ಆಕೆಯನ್ನು ತಬ್ಬಿ ಹಿಡಿದು ಅಳತೊಡಗಿತು.

ಅರುಂಧತಿ ಗಾಬರಿಯಾದಳು. ಅವಳಿಂದ ಕೈ ಕೊಡವಿಕೊಂಡು ಮನೆಯ ಅಷ್ಟೂ ಲೈಟುಗಳನ್ನು ಹಾಕಿದಳು. ಇಪ್ಪತ್ತು ಇಪ್ಪತ್ತೆರಡರ ಹುಡುಗಿ ತೀರಾ ಹರಿದ ದುಪ್ಪಟ್ಟಾ, ಕಿತ್ತು ಹೋದ ಮೊಣಕೈ ಕೆಮ್ಮಣ್ಣು ಮೆತ್ತಿಕೊಂಡ ಕೆನ್ನೆ. ಹರಿದು ರಕ್ತ ಜಿನುಗುತ್ತಿರುವ ತುಟಿ. ಯುದ್ಧ ಪಿಪಾಸುವೊಬ್ಬ ಸಾಮ್ರಾಜ್ಯ ಹತ್ತಿಕ್ಕಲು ಯತ್ನಿಸಿದ ಎಲ್ಲ ಗುರುತುಗಳು ಆಕೆಯಲ್ಲಿದ್ದವು.

